ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ರೀತಿ ಬಂದಾಗ 20 ಮಂದಿ ಗೋಲ್ಡ್ ಮೆಡಲ್ ತೆಗೆದುಕೊಂಡಿದ್ದರೆ ಅಂತಹ ಸಂದರ್ಭದಲ್ಲಿ ಮೆರಿಟನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು.

ಶ್ರೀ ಬಿ. ಸೋಮಶೇಖರ್ : ಮೆರಿಟ್ ಸೀಟ್ ಎಂದರೆ.

Mr. Speaker : Let us stake this matter tomorrow.

ಶ್ರೀ ಎಂ. ಸಿ. ನಾಣಯ್ಯ : ನಮ್ಮ ಸದಸ್ಯರ ಚಿಂತನೆ ಏನೆಂದರೆ ನಿಜವಾಗಿಯೂ ಬಹಳ ಕೆಳಹಂತದಿಂದ ಮೇಲು ಹಂತಕ್ಕೆ ಹೋಗಿರುವ ನಮ್ಮ ಕ್ರೀಡಾಪಟುಗಳು ಯಾರಿದ್ದಾರೆ ಅವರು ವಿದ್ಯಾಭ್ಯಾಸಕ್ಕಾಗಿ ಹೆಚ್ಚಿನ ಸಮಯವನ್ನು ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವರು ಕ್ರೀಡೆಯಲ್ಲಿ ಸಾಧನೆ ಮಾಡಿದ್ದಾರೆ. ಅಂತಹ ಸಂದರ್ಭದಲ್ಲಿ ಅವರು ರಾಷ್ಟ್ರಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಹೋಗಿ ಖ್ಯಾತಿಗಳಿಸಿರುತ್ತಾರೆ. ಕೊನೆಗೆ ಸಿಇಟಿ ಪ್ರವೇಶ ಪರೀಕ್ಷೆಯಲ್ಲಿ ಮಾರ್ಕ್ಸ್ ಕಡಿಮೆ ಬಂದಿರುತ್ತದೆ. ಆದುದರಿಂದ ಅಂಥವರಿಗೆ ಹೆಚ್ಚಿನ ಆದ್ಯತೆ ಕೊಡತಕ್ಕಂಥ ಚಿಂತನೆಯನ್ನು ಅಧ್ಯಕ್ಷರು ವ್ಯಕ್ತ ಮಾಡಿದ್ದಾರೆ. ಬಹುಶಃ ಅದು ನಮ್ಮ ಚಿಂತನೆ ಎಂದು ಕಾಣುತ್ತದೆ. ಅದಕ್ಕೆ ಅನುಗುಣವಾಗಿರಬೇಕೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ನಾವು ಪುನಃ ಸೋಮವಾರದೊಳಗೆ ಅದನ್ನೇ ಮತ್ತೆ ಚರ್ಚೆ ಮಾಡಿ ಅದರಲ್ಲಿ ತಾವು ಹೇಳಿರತಕ್ಕ ಚಿಂತನೆಗೆ ವಿಭಿನ್ನವಾಗಿ ಯಾವುದಾದರೂ ಇದ್ದರೆ ಖಂಡಿತವಾಗಿಯೂ ಸರ್ಕಾರದ ವತಿಯಿಂದ ಈ ಬಗ್ಗೆ ಚಿಂತನೆ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಕ್ರೀಡಾ ಸಚಿವರು ನಾನು ಮತ್ತು ನಮ್ಮ ವಿದ್ಯಾಮಂತ್ರಿಗಳು ಸೇರಿ ಚಿಂತನೆ ಮಾಡುತ್ತೇವೆ. ರಾಷ್ಟ್ರಮಟ್ಟದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿರುವ ಕ್ರೀಡಾಪಟುಗಳಿಗೆ ಅನ್ಯಾಯ ಆಗಬಾರದು ಎಂಬುದು ನಮ್ಮ ಚಿಂತನೆ. ಕೆಳಹಂತದಲ್ಲಿರುವವರಿಗೆ ಮೇಲು ಹಂತದಲ್ಲಿರುವವರನ್ನು ಬಿಟ್ಟು ಎಲ್ಲಾದರೂ ಸೀಟ್ ಸಿಕ್ಕರೆ ಅದರಲ್ಲಿ ವಂಚನೆ ಬರುತ್ತದೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಹೇಳಿದಂತೆ ಒಂದು ವೇಳೆ ನಾಲ್ಕು ಜನ ಒಂದೇ ಇಂಟರ್ ನ್ಯಾಷನಲ್ ಲೆವಲ್‌ಗೆ ಹೋಗಿರುವವರು ಇರುತ್ತಾರೆ ಅದರಲ್ಲಿ ಮೆರಿಟ್ಟನ್ನೇ ತೆಗೆದುಕೊಳ್ಳಬೇಕು ಎಂಬುದರಲ್ಲಿ ನಮ್ಮ ಅಭ್ಯಂತರವೇನೂ ಇಲ್ಲ.

SRI. M.C. NANAIAH : Other things being equal, interse Merit List we will certainly look into it and come on Monday.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲ್ಪಟ್ಟ ವಿಷಯಗಳು

### ದಕ್ಷಿಣ ಕನ್ನಡ ಜಿಲ್ಲೆ ಪಲಿಮಾರು ಮತ್ತು ಕುರ್ಕಾಲು ಅಣೆಕಟ್ಟುಗಳನ್ನು ದುರಸ್ತಿ ಮಾಡದೆ ಕೃಷಿಕರಿಗೆ ತೊಂದರೆ.

ಶ್ರೀ ವಸಂತ ವಿ. ಸಾಲಿಯಾನ : ಮಾನ್ಯ ಅಧ್ಯಕ್ಷರೆ, ಫಲಿಮಾರು ಅಣೆಕಟ್ಟು ಮತ್ತು ಕುರ್ಕಾಲು ಅಣೆಕಟ್ಟು ಈ ಎರಡು ಅಣೆಕಟ್ಟುಗಳು ಕೂಡ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ದೊಡ್ಡ ನೀರಾವರಿ ಅಣೆಕಟ್ಟುಗಳಾಗಿವೆ. ಈ ಫಲಿಮಾರು ಅಣೆಕಟ್ಟಿನ ವ್ಯಾಪ್ತಿಗೆ ಸುಮಾರು 7 ಗ್ರಾಮಗಳು ಬರುತ್ತವೆ

ಹಾಗೂ ಇದು ಸುಮಾರು 5 ಸಾವಿರ ಎಕರೆ ಕೃಷಿ ಭೂಮಿಗೆ ನೀರಾವರಿ ಸೌಲಭ್ಯ ದೊರಕುವಂಥ ಒಂದು ಅಣೆಕಟ್ಟಾಗಿದೆ. ಅದೇ ರೀತಿ ಕುರ್ಕಾಲು ಅಣೆಕಟ್ಟು ಸುಮಾರು 3 ಸಾವಿರ ಎಕರೆ ಕೃಷಿ ಭೂಮಿಗೆ ನೀರಾವರಿ ಒದಗಿಸುವಂಥ ಅಣೆಕಟ್ಟಾಗಿದೆ. ಈ ಅಣೆಕಟ್ಟುಗಳು ಸುಮಾರು 3 ವರ್ಷಗಳಿಂದ ದುರಸ್ಥಿಯಲ್ಲಿದ್ದು ಇದನ್ನು ನೀರಾವರಿ ಇಲಾಖೆಯವರು ದುರಸ್ಥಿ ಮಾಡದೆ ಕೃಷಿಕರಿಗೆ ಬಹಳ ತೊಂದರೆಯಾಗಿದೆ. ಇದರ ಬಗ್ಗೆ ಹಲವಾರು ಮನವಿಗಳನ್ನು ಮಾಡಿಕೊಂಡಿದ್ದರೂ ಸಹ ಈವರೆಗೆ ಆ ಎರಡು ಅಣೆಕಟ್ಟುಗಳು ದುರಸ್ಥಿ ಆಗಿಲ್ಲ. ಅದೇ ರೀತಿಯಲ್ಲಿ ನನ್ನ ಕ್ಷೇತ್ರದ ಪಾದರುಬೆಟ್ಟ ತೋಡಿನ ರಿಪೇರಿಗೆ ಈಗಾಗಲೇ ಸುಮಾರು 11 ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟ್ ಆಗಿದೆ. ಅದರ ಹೂಳೆತ್ತುವ ಕಾರ್ಯಕ್ರಮ ಕೂಡ ಆಗಿಲ್ಲ. ಇದೇ ರೀತಿಯಲ್ಲಿ ಉಯಲಗೋಳ ಗ್ರಾಮದಲ್ಲಿ ಒಂದು ದೊಡ್ಡ ತೋಡಿದೆ. ಆ ತೋಡು ಸುಮಾರು ಒಂದು ಸಾವಿರ ಎಕರೆ ಭೂಮಿಗೆ ಪ್ರಯೋಜನವಾಗುವಂತಹ ಯೋಜನೆ. ಅದೇ ರೀತಿಯಲ್ಲಿ ಮಲ್ಲಾರು, ಮಜೂರು, ಪಾದೂರು ಈ ಪ್ರದೇಶಗಳ ವ್ಯಾಪ್ತಿಯಲ್ಲಿ ಒಂದು ದೊಡ್ಡ ತೋಡಿದೆ. ಅದರಲ್ಲಿಯೂ ಸಹ ಹೊಳೆತ್ತುವ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗಿದೆ. ಇದು ಸುಮಾರು ಒಂದು ಸಾವಿರ ಎಕರೆ ಕೃಷಿ ಭೂಮಿಗೆ ನೀರಾವರಿ ಒದಗಿಸುವಂಥ ಕಾಮಗಾರಿಯಾಗಿದೆ. ಅದನ್ನು ಆದಷ್ಟು ಬೇಗ ಮುಗಿಸಬೇಕೆಂದು ತಮ್ಮ ಮೂಲಕ ನೀರಾವರಿ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ತಿಪ್ಪೇಸ್ವಾಮಿ : ಸನ್ಮಾನ್ಯ ಸದಸ್ಯರು ಕೇಳಿದಂಥ ವಿಷಯದಲ್ಲಿ ಸತ್ಯಾಂಶ ಇದೆ. ಈ ವರ್ಷ ಆ ಎರಡು ಕಾಮಗಾರಿಗಳಿಗೆ ಹಣವನ್ನು ತೊಡಗಿಸಿಲ್ಲ. ಈಗ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮತ್ತು ಆರ್ಥಿಕ ಸಚಿವರಲ್ಲಿ ನನಗೆ ಇನ್ನೂ ಸ್ವಲ್ಪ ಹಣ ಬೇಕು ಎಂದು ಕೇಳಿಕೊಂಡಿದ್ದೇನೆ. ಅವರೇನಾದರೂ ಮಾರ್ಚ್ ತಿಂಗಳಲ್ಲಿ ಹಣ ಕೊಟ್ಟರೆ ನಿಜವಾದರೆ ಈ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುತ್ತೇನೆ. ಇಲ್ಲದಿದ್ದರೆ ಮುಂದಿನ ಬಜೆಟ್‌ನಲ್ಲಿ ಇದಕ್ಕೆ ಹಣ ಕೊಟ್ಟು ಏಪ್ರಿಲ್ ಅಥವಾ ಮೇ ತಿಂಗಳಲ್ಲಿ ಈ ಕೆಲಸವನ್ನು ಮಾಡುವುದಕ್ಕೆ ನಾನು ಅನುಮತಿಯನ್ನು ಕೊಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ : ನನ್ನದು ಇನ್ನೂ ಒಂದು ವಿಷಯ ಬಾಕಿ ಇದೆ.

ಅಧ್ಯಕ್ಷರು : ಅದನ್ನು ನಾಳೆ ತೆಗೆದುಕೊಳ್ಳೋಣ. ಈಗ ಬಹಳ ಸಮಯವಾಗಿದೆ.

ಶ್ರೀ ವಸಂತ ವಿ. ಸಾಲಿಯಾನ : ಮಂತ್ರಿಗಳು ನಿನ್ನೆ ದಿವಸ ಇರಲಿಲ್ಲ, ಮೊನ್ನೆ ದಿವಸ ಇರಲಿಲ್ಲ.

ಅಧ್ಯಕ್ಷರು : ಆ ವಿಷಯ ಯಾವುದು?

ಶ್ರೀ ವಸಂತ ವಿ.ಸಾಲಿಯಾನ : ಅದು ಆರಾಧನಾ ಕಾರ್ಯಕ್ರಮಕ್ಕೆ ಸಂಬಂಧಪಟ್ಟದ್ದುದು. ನನ್ನ ಕ್ಷೇತ್ರ ಉಡುಪಿ ಕ್ಷೇತ್ರದಲ್ಲಿ ಆರಾಧನಾ ಕಾರ್ಯಕ್ರಮವಾಗಿ ಸುಮಾರು 3 ವರ್ಷಗಳಾಗಿದೆ.

ಅಧ್ಯಕ್ಷರು : ಆರಾಧನಾ ಕಾರ್ಯಕ್ರಮ ಮುಜರಾಯಿ ಇಲಾಖೆಯಲ್ಲಿ ಬರುವುದಿಲ್ಲ.

ಶ್ರೀ ವಸಂತ ವಿ. ಸಾಲಿಯಾನ : ಆರಾಧನಾ ಸ್ಕೀಂನಡಿಯಲ್ಲಿ ಆರಾಧನಾ ಸಮಿತಿಗಳಾಗದೆ ಸುಮಾರು ಮೂರು ವರ್ಷಗಳಿಂದ ಆರಾಧನಾ ಪೂಜಾ ಮಂದಿರಗಳು ರಿಪೇರಿಯಾಗಿಲ್ಲ. ಬೇರೆ

ಕ್ಷೇತ್ರಗಳಲ್ಲಿ ಈಗಾಗಲೇ ಈ ಕಾರ್ಯಕ್ರಮವಾಗಿದೆ. ನಮ್ಮ ಎರಡು ಕ್ಷೇತ್ರಗಳಲ್ಲಿ ಮಾತ್ರ ಆಗಿಲ್ಲ ಮತ್ತು ರಾಜ್ಯದಲ್ಲಿ ಇಷ್ಟೆಲ್ಲಾ ಹಣ ಉಪಯೋಗವಾದರೂ ಸಹ ಸರಿಯಾಗಿ ಪೂಜಾ ಮಂದಿರಗಳಿಗೆ ಉಪಯೋಗವಾಗುತ್ತಿಲ್ಲ. ಇದರ ಬಗ್ಗೆ ನಾವು ಆಕ್ಷೇಪವನ್ನು ಎತ್ತಿದ್ದೇವೆ. ಅನೇಕ ಬಾರಿ ಮಾನ್ಯ ಮಂತ್ರಿಗಳು ಇಲ್ಲದ ಕಾರಣ ನಾನು ಈಗ ತಮ್ಮ ಗಮನಕ್ಕೆ ತಂದಿದ್ದೇನೆ. ಇವತ್ತೂ ಸಹ ಅವರು ಇಲ್ಲ. ಬಹುಶ: ಅವರು ಮಾಯವಾಗಿದ್ದಾರೆ ಎಂದು ಕಾಣುತ್ತದೆ. ಅವರಿಂದ ಸರಿಯಾದಂಥ ಕಾರ್ಯಕ್ರಮವೂ ಸಹ ಆಗುತ್ತಿಲ್ಲ.

4.40 ಪಿ.ಎಂ.

ಶ್ರೀ ರಮೇಶ್. ಸಿ. ಜಿಗಜಿಣಗಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಇದು ಮುಜರಾಯಿ ಇಲಾಖೆಯ ಸಚಿವರಾದ ಶ್ರೀಮಾನ್ ಮುನಿಯಪ್ಪ ಮುದ್ದಪ್ಪನವರಿಗೆ ಬರುತ್ತದೆ. ಆದರೂ ಸಹ ಸರ್ಕಾರದ ಪರವಾಗಿ ಇದನ್ನು ಸಚಿವರ ಗಮನಕ್ಕೆ ತಂದು ಸರಿಪಡಿಸಲು ಪ್ರಯತ್ನ ಮಾಡುತ್ತೇನೆ.

ಶ್ರೀ ವಸಂತ ವಿ. ಸಾಲಿಯಾನ್ : ಮೂರು ವರ್ಷಗಳಿಂದ ಉಡುಪಿ ಮತ್ತು ನನ್ನ ಎರಡು ಕ್ಷೇತ್ರಗಳಲ್ಲಿ ಆರಾಧನ ಸಮಿತಿಯಾಗಿರುವುದಿಲ್ಲ, ಕಳೆದ ಮೂರು ವರ್ಷಗಳಿಂದ ಅದನ್ನು ಮಾಡುತ್ತೇವೆಂದು ಹೇಳಿಕೊಂಡು ಬರುತ್ತಿದ್ದಾರೆ. ಅದರ ಬಗ್ಗೆ ಭರವಸೆಯನ್ನು ಇಲ್ಲಿ ಕೊಡುತ್ತಾರೆ. ಆದರೆ ಇದುವರೆಗೆ ಮಾಡಿಲ್ಲ.

ಅಧ್ಯಕ್ಷರು : ಸೋಮವಾರ ಮುಜರಾಯಿ ಸಚಿವರನ್ನು ಇಲ್ಲಿಗೆ ಕರೆಯಿಸುತ್ತೇನೆ. ಅಂದು ತಮ್ಮ ವಿಚಾರಕ್ಕೆ ಉತ್ತರ ಕೊಡಿಸುತ್ತೇನೆ.

## ಹೆಚ್ಚಿನ ಮಳೆಯಿಂದ 41 ಮನೆಗಳು ನಾಶವಾಗಿ 24 ಜನರು ಬೀದಿ ಪಾಲು.

ಶ್ರೀ ನಾರಾಯಣ ರಾವ್ ಗೋವಿಂದರಾವ್ ತರಳೆ (ಬೆಳಗಾಂ) : ಮಾನ್ಯ ಅಧ್ಯಕ್ಷರೆ, I would like to bring to the kind attention of the Government due to rainfall in the Month of June, July and 1st August, nearly 41 houses totally collapsed. One Dalit family and his three brothers consisting of 24 members came on the road. I would request the Government to kindly look into the matter and as early as possible provide them relief through the appropriate channel. This is my personal request through the Hon'ble Speaker to the Government.

MR. SPEAKER : Who is answering this. Somebody should take up the responsibility.

SRI. R.V. DESHPANDE : Answer will be given tomorrow.

MR. SPEAKER : He is making a personal request. He is a hon.Member of this House.